ಬಾವಿದಂಡೆಯಲಿ ಮಲಗಿದ್ದೆ. ನನ್ನ ಪಕ್ಕದಲಿ ಅಪ್ಪನೂ ಮಲಗಿದ್ದ. ಆದರೆ, ಅವನಲ್ಲಿ ಉಸಿರಿರಲಿಲ್ಲ ಅಷ್ಟೇ.

'ಚೆಯ್, ಇಂತೆ ಮಕ್ಳುನ್ನ ಎತ್ಮೇಕೆ ಕೆರೆಬಾವಿ ನೋಡ್ಕಣದೆ ಇನ್ನೇನಾಮ್ಡಕ್ಕಾದ್ದು?'

ಮರುಕ್ಷಣವೇ ನಾನಲ್ಲಿಂದ ಎದ್ದು ಓಡಿದ್ದೆ. ಮನೆಗೆ ಬಂದರೆ ಅಮ್ಮ ಕೂದಲು ಬಿರಿಹೊಯ್ದುಕೊಂಡು ಗೋಡೆಗೆ ತಲೆ ಚಚ್ಚಿಕೊಳ್ಳುವುದು ಕಾಣಿಸಿತ್ತು. ಸರಸ್ವತಿ ಎಲ್ಲಿ ಒಬ್ಬಳೇ ಕೂತು ಅಳುತ್ತಿದ್ದಳೋ ಅವಳು ಕಾಣಸಿಕ್ಕಿರಲಿಲ್ಲ.

ನನಗಂತೂ ಆ ಕ್ಷಣ ನನಗೆ ಅಲ್ಲಿಂದ ಪಾರಾಗಿ ಓಡಬೇಕಿತ್ತು, ಎಲ್ಲಿಗಾದರೂ... ಎಲ್ಲಿಗೋ ಒಂದುಕಡೆ.

ಅಲಮಾರಿನಿಂದ ಕೈಗೆ ಬಂದ ಹಣ ಬಾಚಿಕೊಂಡು ಅಲ್ಲಿಂದ ಕಾಲ್ಕಿತ್ತಿದ್ದೆ. ಮೈಸೂರಿನಿಂದ ಒಂದೇ ಬಸ್ಸು, ಸೀದಾ ಊಟಿಗೆ ಒಯ್ದು ಬಿಸಾಕಿತ್ತು. ಬದುಕು ಕೊಯಂಬತ್ತೂರಿಗೆ ಕರೆದೊಯ್ದಿತ್ತು. ಮಾಡದ ಕೆಲಸವಿಲ್ಲ, ಮಲಗದ ಜಾಗವಿಲ್ಲ. ಬೀದಿಬದಿಯಿಂದ, ಬಸ್‌ಸ್ಟಾಂಡಿನಿಂದ, ಪಾರ್ಕಿನಿಂದ, ಹೊಳೆದಂಡೆಯಿಂದ, ಅವರಿವರ ಮನೆ ಜಗುಲಿಯಿಂದ, ಇಂದು ಸ್ಟಾರ್ ಹೋಟೆಲಿನಲ್ಲಿ ರೂಂ ಹಿಡಿದು ತಂಗುವ ಮಟ್ಟಿಗೆ ಬೆಳೆದಿದ್ದೇನೆಂದರೆ, ಅಷ್ಟು ದುಡಿದಿದ್ದೇನೆ, ಅಷ್ಟು ನಿಯತ್ತಿನಿಂದ ದುಡಿದಿದ್ದೇನೆ ಎಂದರ್ಥ.

ಒಂದು ಬಿಕ್ಕಟ್ಟು ಎದುರಾದಾಗ, ಅದರಲ್ಲೂ ಅಪವಾದ ಬಂದಾಗ ಒಬ್ಬ ಸರಾಸರಿ ಮನುಷ್ಯನೆದುರು ಯಾವತ್ತೂ ಎರಡು ಆಯ್ಕೆಗಳಿರುತ್ತವೆ. ಒಂದು, ಅಪವಾದವನ್ನು ಮೀರಿ ಹೊರಬರಲು ಅಪವಾದಕ್ಕೆ ಅಪವಾದವಾಗಿ ನಡಕೊಳ್ಳುವುದು. ಇನ್ನೊಂದು, ಏನ್ಮಾಡಿ ಏನ್ಬಂತು? ಇಷ್ಟೆಲ್ಲ ಮಾಡಿಯೂ ಕಡೆಗೆ ಕೆಟ್ಟ ಹೆಸರು ತಾನೇ ಉಳಿದಿದ್ದು? ಒಳ್ಳೇದಕ್ಕೆ ಕಾಲವಿಲ್ಲ ಅಂದುಕೊಂಡು ಅಪವಾದಕ್ಕೆ ಪೂರಕವಾಗಿ ನಡಕೊಳ್ಳೋದು. ನಾನು ಮೊದಲನೆಯದನ್ನು ಆಯ್ದುಕೊಂಡಿದ್ದೆ. ತಲೆಯಲ್ಲಿ ಇದ್ದದ್ದು ಅಕಾರಣವಾಗಿ,



ಅವಸರದಲಿ ಸತ್ತ ಅಪ್ಪ, ನನ್ನ ಮುಖ ನೋಡಿದೊಡನೇ, 'ನಿನ್ ಬಾಯಿಗ್ ಮಣ್ಣಾಕ, ಮಾಡೋದು ಮಾಡಿ ಗುಟ್ರುಗೂಳಿಯಂಗೆ ಮನಿಗೆ ಬತ್ತಿದಿಯೇಯಲ್ಲ, ಅವ್ರು ಬೊದ್ಲು ನೀನಲ್ವಾ ಸಾಯ್ಬೇಕಾದೋನು' ಅಂದ ಅಮ್ಮ. ಮುಖ ತೋರದೇ ಉಳಿದ ಸರಸ್ವತಿಯ ಚೆಲುಮೊಗ. ಇವಿಷ್ಟೇ. ಈ ತನಕಲೂ ಈ ಕಣ್ಣೊಳಗೆ ನಿಂತಿರುವುದು ಅದಷ್ಟೇ.

ಈಗ ಮತ್ತೆ ಮೊದಲಿನಿಂದ ಏನನ್ನು ಕೇಳಿಸಲಿದ್ದಾಳೆ ಹೊನ್ನಿ? ಎಲ್ಲ ಮುಗಿದ ಮೇಲೆ?

ನಾನು ಪಡಸಾಲೆಗೆ ಹೋದಾಗ ಹೊನ್ನಿ ದಿಣ್ಣೆಯ ಮೇಲೆ ಹೊರಮುಖವಾಗಿ ಕುಳಿತಿರುವುದು ಕಾಣಿಸಿತು. ಅವಳ ಬಡಕಲು ಬಿದ್ದ ಬೆನ್ನು, ಸಡಿಲಾಗಿ ಬೆನ್ನ ಕಡೆ ಎತ್ತಿಕೊಂಡು ಸುಕ್ಕುಗಟ್ಟಿರುವ ಮಾಸಿದ ಬ್ಲೌಸು, ಅಡಸಾಬಡಸಾ ಸುತ್ತಿಕೊಂಡಿರುವ ಸೀರೆ, ಒಂದಿಷ್ಟೂ ನೇರ್ಪು ಮಾಡದೆ ಹಾಗೆ ಹಾರಬಿಟ್ಟ ಕೆದರು ಕೂದಲು! ಹೊನ್ನಿಯೆ ಇದು? ಇವಳೇಕೆ ಇಷ್ಟೊಂದು ಬಡಲಕಾಗಿಬಿಟ್ಟದ್ದಾಳೆ. ಪಕ್ಕೆಲುಬು ಎದ್ದುಕಾಣುವಷ್ಟು?

'ಹೊನ್ನಕ್ಕ?' ನನ್ನ ದನಿ ಸರಿಯಾಗಿ ಹೊಮ್ಮದೆ ಗೊರಗೊರ ಸದ್ದು ಮಾಡಿತು.

'ಎಂಗಿದೀಯಪ್ಪ? ಯೇನೇನೋ ಯೇನೇನೋ ಆಗೊದೊ ಕಣೋಗ್, ಇಂಗೆಲ್ಲ ಆಯ್ತದೆ ಅಂತ ನಂಗೂ ಗೊತ್ತಿರ್ನಿಲ್ಲ ಮೊಗ, ಅವ್ರೊತ್ನೊತ್ಗೆ ನಂಗೆ ಕ್ಯಾಣತ್ತಿ ಕಣ್ ಕಾಣ್ದಂಗಾಗ್ಬುಟ್ಟತ್ತು ಕನ, ಎಲ್ಲ ದುರಾದ್ರುಸ್ಟ'.

'ಈಗ ಏನು ಮಾತಾಡಿ ಏನೂ ಸುಖ ಇಲ್ಲ ಹೊನ್ನಕ್ಕ, ನೀನೋಗು... ಮತ್ತೆ ಹಳೇದೆಲ್ಲ ಮಾತಾಡಿ ಏನು ಸಿಗತ್ತೆ ಹೋಗು'.

'ಅಷ್ನೇ, ನೀ ಯೇಳ್ತೀಯ ಓಗೂಂತ, ಎಲ್ಗೋಗಾನೆ ಯೇಳು. ನಿನ್ನೋಡಿದ್ದೇ ವೊಸಿ ಸಮಾದಾನಾಗ್ನಿಲ್ಲ. ಎಲ್ಲಿ ನೀನೂ ಅಪ್ಪಂಗೆ ಯೇನಾರ ಎಚ್ಕಮ್ಮಿ ಮಾಡ್ಕಬುಟ್ಟಿದ್ದೀಯೋ ಯೇನೋಂತ ವೊಸಿ ಅತ್ಕಂಡಿಲ್ಲ ನಾನು'.

'ಸರಿ ಹೋಗ್ಲಿ ಬುಡಕ್ಕ, ಮಂಜು ಹೇಗಿದಾಳೆ?'

'ಅಯ್ಯೋ, ಅದ್ನೇನು